ಕಮಲಾಪುರ ಕ್ಷೇತ್ರದಲ್ಲಿ ನಬಾರ್ಡ್‌ನಿಂದ ತೆಗೆದುಕೊಂಡಿರುವ ರಸ್ತೆ ಕಾಮಗಾರಿ ಪೂರ್ಣವಾಗಿರುವ ಬಗ್ಗೆ.

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಅಧ್ಯಕ್ಷರೇ, ಕಮಲಾಪುರ ಮತಕ್ಷೇತ್ರದಲ್ಲಿ ನಬಾರ್ಡ್‌ನಿಂದ ಒಂದು ರಸ್ತೆಯಾಗಿದೆ. ಅದು 26 ಕಿ.ಮೀ ಇದ್ದು 22 ಕಿ.ಮೀ ಕಾಮಗಾರಿ ಚಾಲೂ ಆಗಿದೆ. ಇನ್ನೂ 4 ಕಿ.ಮೀ. ಉಳಿದಿದೆ. ಅದು ಆಳಂದ ಕ್ಷೇತ್ರಕ್ಕೆ ಅರ್ಧ ಬರುತ್ತದೆ, ಕಮಲಾಪುರ ಕ್ಷೇತ್ರಕ್ಕೆ ಅರ್ಧ ಬರುತ್ತದೆ. ಈ 4 ಕಿ.ಮೀ. ಗಳ ಕಾಮಗಾರಿಯನ್ನು ಮಾಡದಿದ್ದರೆ, ಅಷ್ಟು ದುಡ್ಡು ಖರ್ಚು ಮಾಡಿಯೂ ಉಪಯೋಗ ಇಲ್ಲದ ಹಾಗೆ ಆಗುತ್ತದೆ. ಈ ಕಾಮಗಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕು ಎಂದು ಸರ್ಕಾರವನ್ನು ವಿನಂತಿ ಮಾಡುತ್ತೇನೆ. ಈ ರಸ್ತೆ ಕಜ್ಜೂರಿ ಬಾರ್ಡರ್, ದಡೋರ, ಅಣ್ಣಾ, ನೀರ್‌ಗುಡಿ ಪಡಸಾವಳಿ, ಸಾವಳೇಸುರ್‌ಗಳಲ್ಲಿ ಬರುತ್ತದೆ. ಸಾವಳೇಸುರ್‌ಗೆ ಹೋಗುವ ಮುನ್ನ ಸೊಲ್ಲಾಪುರಕ್ಕೆ ಹೋಗುವ ರಸ್ತೆಗೆ ಹೋಗಿ ಮುಟ್ಟುತ್ತದೆ. ಇದನ್ನು ಮಾಡಿದರೆ ಒಳ್ಳೆಯ ಕೆಲಸ ಆಗುತ್ತದೆ ಎಂದು ಸರ್ಕಾರವನ್ನು ಕಳಕಳಿಯಿಂದ ವಿನಂತಿ ಮಾಡುತ್ತೇನೆ. ಆಳಂದ-ನೀರ್‌ಗುಡಿ ರಸ್ತೆ 14 ಕಿ.ಮೀ.ಇದೆ. ಮತ್ತು ಹೆಚ್ ಕೆ ಡಿ ಬಿ ಯಲ್ಲಿ ಸಂಪೂರ್ಣವಾಗಿ ಕೆಲಸ ಮುಗಿಯಲು ಎರಡೂವರೆ ಕಿ.ಮೀ ಉಳಿದಿದೆ. ಇದು ಡಾಂಬರೀಕರಣವಾದರೆ ಒಳ್ಳೆಯ ಕೆಲಸವಾಗುತ್ತದೆ ಮತ್ತು ಇಷ್ಟು ದುಡ್ಡನ್ನು ಖರ್ಚು ಮಾಡಿದ್ದು ಉಪಯೋಗವಾಗುತ್ತದೆ. ಎಂದು ತಮ್ಮ ಮೂಲಕ ಸರ್ಕಾರವನ್ನು ಕಳಕಳಿಯಿಂದ ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವಂಥ ರಸ್ತೆ ಆಳಂದ-ನೀರ್‌ಗುಡಿಯಲ್ಲಿ ಎರಡೂವರೆ ಕಿ.ಮೀ. ಹಾಗೂ ಕಜೂರಿ ಮತ್ತು ಪಡಸಾವಳಿ ಮಧ್ಯದಲ್ಲಿರುವಂಥ ನಾಲ್ಕು ಕಿ.ಮೀ. ರಸ್ತೆಗಳನ್ನು ಅನುದಾನದ ಲಭ್ಯತೆ ಮೇಲೆ ಕೆಲಸವನ್ನು ಪೂರೈಸುತ್ತೇವೆ. ಮತ್ತು ಇದನ್ನು ತೀವ್ರಗತಿಯಲ್ಲಿ ಮಾಡುವಂಥ ಕೆಲಸವನ್ನು ಮಾಡುತ್ತೇವೆ.

ಮಡಿಕೇರಿಯ ಪದವಿ ಪೂರ್ವ ವಿದ್ಯಾಲಯದಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆ.

ಶ್ರೀ ಸುಬ್ಬರಾಯ ಮಾದಪ್ಪ ದ್ಯಾಮಕೋಡಿ (ಮಡಿಕೇರಿ) : ಸನ್ಮಾನ್ಯ ಸಭಾಧ್ಯಕ್ಷರೇ, ಮಡಿಕೇರಿ ಪದವಿಪೂರ್ವ ವಿದ್ಯಾಲಯದ ಪಿ.ಯು.ಸಿ. ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ ಬಗ್ಗೆ ಸರ್ಕಾರವನ್ನು ಕೇಳುತ್ತಿದ್ದೇನೆ. ಮಡಿಕೇರಿ ಪದವಿಪೂರ್ವ ವಿದ್ಯಾಲಯದಲ್ಲಿ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸುವಾಗ ಅನೇಕ ತಪ್ಪುಗಳು ನೆಡೆದವು. ಭೌತಶಾಸ್ತ್ರದ ಪರೀಕ್ಷೆಯ ದಿನ ಮೊದಲು ಗ್ರಾಫ್ ಹಾಳೆಯನ್ನು ನೀಡಿ ಬಳಿಕ ಅದನ್ನು ವಾಪಸ್ಸು ಪಡೆದರು. ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಲಾಗರಿಥಮ್ ಟೇಬಲ್‌ನ ಅವಶ್ಯಕತೆ ಇದ್ದರೂ, ಕೊಠಡಿಯ ಮೇಲ್ವಿಚಾರಕರು ಲಾಗರಿಥಮ್ ಟೇಬಲನ್ನು ಇಬ್ಬರಿಗೆ ಒಂದರಂತೆ ಸುಮಾರು 11.00